**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 977/2019**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಜಿ. ಮಂಜುನಾಥ | ಸಿ.ಡಬ್ಲ್ಯೂ-11 |
| ತಂದೆ ಹೆಸರು | : | ಲೇಟ್ ಗಂಗಾಧರಪ್ಪ | ಪಿ.ಡಬ್ಲ್ಯೂ-05 |
| ವಯಸ್ಸು | : | 58 ವರ್ಷ | |
| ಉದ್ಯೋಗ | : | ಪಿ ಎಸ್ ಐ | |
| ವಾಸಸ್ಥಳ | : | ಅಬ್ಬಿನಹೊಳೆ | ದಿಃ 27-09-2025. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

2016 ರಿಂದ 2021 ರವರೆಗೆ ನಾನು ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ . ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.20.06.2019 ರಂದು ಬೆಳಿಗ್ಗೆ 09.00 ರಿಂದ 02.00 ಗಂಟೆಯವರೆಗೆ ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದಾಗ ಚಳ್ಳಕೆರೆ ಸರ್ಕಾರಿ ಆಸ್ಪತ್ರೆಯಿಂದ ಚಾಸಾ-1 ರವರ ಎಂ.ಎಲ್.ಸಿ.,ಯಾದಿ ಬಂದಿದ್ದು, ನಾನು ಕೂಡಲೇ ಆಸ್ಪತ್ರೆಗೆ ಭೇಟಿ ಮಾಡಿ ಚಾಸಾ-1 ರವರನ್ನು ವಿಚಾರಣೆ ಮಾಡಿದಾಗ ಅಪಘಾತಕೆಕ ಸಂಬಂಧಿಸಿದಂತೆ ತನ್ನ ಗಂಡನನ್ನು ಸಂಪರ್ಕಿಸಿ ದೂರು ನೀಡುತ್ತೇನೆ ಎಂದು ಹೇಳಿದ ಕಾರಣ , ನಾನು ಪುನಃ ಮದ್ಯಾಹ್ನ 03.00 ಗಂಟೆಗೆ ಆಸ್ಪತ್ರೆಗೆ ಹೋಗಿ ಚಾಸಾ-1 ರವರು ನೀಡಿದ ಹೇಳಿಕೆ ದೂರನ್ನು ಪಡೆದುಕೊಂಡು, ನಂತರ ಠಾಣೆಗೆ 03.45 ಗಂಟೆ ಬಂದು ನಮ್ಮ ಠಾಣಾ ಗುನ್ನೆ ಸಂಖ್ಯೆ 200/2019 ರಂತೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಗೆ ನಿ.ಪಿ.1 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಅಂತ ಗುರುತಿಸಲಾಯಿತು.

ಸಾಕ್ಷಿಗೆ ಪ್ರ.ವ.ವರದಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪ್ರ.ವ.ವರದಿಯನ್ನು ನಿಪಿಃ10 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 10(ಎ) ಅಂತ ಗುರುತಿಸಲಾಯಿತು.

ಅದೇ ದಿನ ಅಪಘಾತ ನಡೆದ ಸ್ಥಳಕ್ಕೆ ಭೇಟಿ ನೀಡಿ ಸಂಜೆ 04.30 ರಿಂದ 05.15 ರವರೆಗೆ ಚಾಸಾ–2 ಮತ್ತು 3 ರವರನ್ನು ಪಂಚರಾಗಿ ಬರಮಾಡಿಕೊಂಡು , ಚಾಸಾ–5 ರವರು ತೋರಿಸಿದ ಜಾಗದಲ್ಲಿ ಸ್ಥಳ ಪಂಚನಾಮೆ ಜರುಗಿಸಿರುತ್ತೇನೆ.

ಸಾಕ್ಷಿಗೆ ನಿ.ಪಿ.7 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿ.ಪಿ.7(ಡಿ) ಅಂತ ಗುರುತಿಸಲಾಯಿತು.

ನಂತರ ಚಳ್ಳಕೆರೆ ಠಾಣಾ ಆವರಣದಲ್ಲಿದ್ದ ಕೆಎ–34 ಎಫ್ –1300 ಕೆ ಎಸ್ ಆರ್ ಟಿ ಸಿ ಬಸ್ಸನ್ನು ಚಾಸಾ–2, 3 ಮತ್ತು 5 ರವರ ಸಮಕ್ಷಮ ಸಂಜೆ 05.45 ರಿಂದ 06.30 ರವರೆಗೆ ವಾಹನ ಪರಿಶೀಲನಾ ಪಂಚಾನಾಮೆಯನ್ನು ಜರುಗಿಸಿ, ಬಸ್ಸನ್ನು ಜಪ್ತು ಪಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ನಿ.ಪಿ.8 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿ.ಪಿ.8(ಡಿ) ಅಂತ ಗುರುತಿಸಲಾಯಿತು.

ನಂತರ ಚಿತ್ರದುರ್ಗ ಆರ್ ಟಿ ಓ ಕಚೇರಿಗೆ ಅಪಘಾತ ಪಡಿಸಿದ ವಾಹನದ ಐ ಎಂ ವಿ ವರದಿಯನ್ನು ನೀಡುವಂತೆ ಮನವಿ ಪತ್ರವನ್ನು ನೀಡಿರುತ್ತೇನೆ.

ಅದೇ ದಿನ ಚಾಸಾ–4 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿನಾಂಕಃ 25.06.2019 ರಂದು ಆರ್ ಟಿ ಓ ಕಚೇರಿಯವರು ನೀಡಿದ ಪ್ರಾಥಮಿಕ ಐ ಎಂ ವಿ ವರದಿಯನ್ನು ಪಡೆದುಕೊಂಡು ಚಾಸಾ–6 ರವರು ಬಸ್ಸಿಗೆ ಸಂಬಂಧಿಸಿದ ದಾಖಲೆಯನ್ನು ಹಾಜರು ಪಡಿಸಿದ ಮೇರೆಗೆ ಇಂಡಿಮಿನಿಟಿ ಬಾಂಡ್ ಪಡೆದು, ಸದರಿ ಬಸ್ಸನ್ನು ಚಾಸಾ–6 ರವರ ಮಧ್ಯಂತರ ವಶಕ್ಕೆ ನೀಡಿರುತ್ತೇನೆ.

ಸಾಕ್ಷಿಗೆ ನಿ.ಪಿ.5 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಅಂತ ಗುರುತಿಸಲಾಯಿತು.

ಅದೇ ದಿನ ಆರೋಪಿಗೆ ದಂಡ ಪ್ರಕ್ರಿಯೇ ಕಲಂ 41 ಎ ರಡಿಯಲ್ಲಿ ನೋಟೀಸ್ ಜಾರಿ ಮಾಡಿರುತ್ತೇನೆ.

ದಿನಾಂಕ 11.07.2019 ರಂದು ಚಾಸಾ–10 ರವರಿಂದ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ನಿ.ಪಿ.4 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಅಂತ ಗುರುತಿಸಲಾಯಿತು.

ದಿನಾಂಕ 02.07.2019 ರಂದು ಚಾಸಾ–9 ರವರಿಂದ ಐ ಎಂ ವಿ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ನಿ.ಪಿ.3 ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಅಂತ ಗುರುತಿಸಲಾಯಿತು.

ದಿನಾಂಕ 11.07.2019 ರಂದು ಆರೋಪಿಯ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ಮಾನ ಘನ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಬಿ ಎಸ್ ಓ., ಆರೋಪಿ ಪರ ವಕೀಲರಿಂದಃ**

ಚಾಸಾ–5 ರವರು ಚಾಸಾ–1 ರವರ ಸಹೋದರ ಎಂದರ ನನಗೆ ಗೊತ್ತಿಲ್ಲ. ಹೇಳಿಕೆ ದೂರನ್ನು ಪಡೆಯುವಾಗ ಚಾಸಾ–2 ರವರ ಜೊತೆ ಬೇರೆ ಯಾರು ಇರಲಿಲ್ಲ. ಜಾಮಿಯಾ ಮಸೀದಿಯ ಅಕ್ಕಪಕ್ಕ ಬೇರೆ ಕಾಂಪ್ಲೆಕ್ಸ್ ಗಳು ಇರುತ್ತವೆ ಎಂದರೆ ಸರಿ. ಜಾಮೀಯಾ ಮಸೀದಿಯ ಎದುರುಗಡೆ ಸುಮಾರು 4–5 ಕಲ್ಯಾಣ ಮಂಟಪಗಳು ಇರುತ್ತವೆ. ಕಲ್ಯಾಣ ಮಂಟಪದ ಹಿಂಭಾಗ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣ ಇರುತ್ತದೆ ಎಂದರೆ ಸರಿ. ಜಾಮೀಯಾ ಮಸೀದಿಯ ಹತ್ತಿರ ಸಾವಿರಾರು ಜನರು ಓಡಾಡುತ್ತಾರೆ ಎಂದರೆ ಸರಿ. ಜಾಮೀಯಾ ಮಸೀದಿಯ ಎದುರುಗಡೆ ಬಲಗಡೆಗೆ ಕೆ ಎಸ್ ಆಟ್ ಟಿ ಸಿ ಬಸ್ ನಿಲ್ದಾಣದ ಇರುತ್ತದೆ ಎಂದರೆ ಸರಿ. ಜಾಮೀಯಾ ಮಸೀದಿಯಿಂದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಣಕ್ಕೆ ಹೋಗುವ ರಸ್ತೆಯ ರಸ್ತೆ ವಿಭಜಕ ಇರುತ್ತದೆ ಎಂದರೆ ಸರಿ. ಜಾಮೀಯಾ ಮಸೀದಿಯ ಹತ್ತಿರ ಜನರು ನಿಧಾನವಾಗಿ ಸಂಚರಿಸಲಿ ಎಂಬ ಉದ್ದೇಶದಿಂದ ರಸ್ತೆ ದಿಬ್ಬವನ್ನು ಹಾಕಲಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ಜನ ಸಂದಣಿ ಇರುವ ಕಾರಣ ವಾಹನಗಳನು ನಿಧಾನವಾಗಿ ಸಂಚರಿಸುತ್ತವೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ಜನ ಸಂದಣಿ ಜಾಸ್ತಿ ಇರುವುದರಿಂದ ವಾಹನಗಳು ನಿಧಾನವಾಗಿಯೇ ಸಂಚರಿಸುತ್ತವೆ ಎಂದರೆ ಸರಿಯಲ್ಲ.

ನಿಪಿ.3 ರ ವರದಿಯ ಪ್ರಕಾರ ಬಸ್ ಯಾವುದೇ ರೀತಿ ಜಖಂಗೊಂಡಿರುವುದಿಲ್ಲ ಎಂದರೆ ಸರಿ. ತನಿಖೆ ವೇಳೆಯಲ್ಲಿ ಬಸ್ ನ ಮುಂಭಾಗ ಎರಡು ಬದಿಗಳಲ್ಲಿ ರಕ್ತದ ಕಲೆಗಳು ಕಂಡು ಬಂದಿರುವುದಿಲ್ಲ. ದಿನಾಂಕ 20.06.20219 ರಂದು ಸುಳ್ಳು ದೂರನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ಅನುಕೂಲವಾಗಲೀ ಎಂಬ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ.2 ಅನ್ನು ಠಾಣೆಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.8 ರ ರೀತ್ಯ ವಾಹನ ಪರಿಶೀಲನಾ ಪಂಚನಾಮೆ ಜರುಗಿಸಿಲ್ಲ ಹಾಗೂ ಪಪಿಂಚರ ಸಹಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರಿಗೆ ಪರಿಹಾರ ದೊರಕಲಿ ಎಂಬ ಉದ್ದೇಶದಿಂದ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಪಿರ್ಯಾದಿಗೆ ಪರಿಹಾರ ದೊರಕಲಿ ಎಂಬ ಉದ್ದೇಶದಿಂದ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳುಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ